# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** NRDWPಯಡಿ ರಾಜ್ಯ ವಲಯದಡಿ 2013-14ರ ಸಾಲಿಗೆ ಎರಡನೇ ಕಂತಿನ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:** 1. ಗ್ರಾಅಪಂ.ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಆದೇಶ ಸಂಖ್ಯೆ: ಗ್ರಾಅಪ/58/ಎಎಫ್ಎನ್/2012, ದಿನಾಂಕ:01.04.2013.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/52/ಗ್ರಾನೀಸ(2)/2013, ದಿನಾಂಕ:15.05.2013.

—

**ಪೀಠಿಕೆ:**

**2013-14ರ ಸಾಲಿಗೆ** NRDWPಯಡಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಅನುಷ್ಠಾನ ಸಲುವಾಗಿ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಪ್ರಸಕ್ತ ಸಾಲಿಗೆ **ಕೇಂದ್ರ ವಲಯದಡಿ** ನಿರೀಕ್ಷಿಸಲಾಗಿರುವ ಅನುದಾನ ಆಧರಿಸಿ, **ರಾಜ್ಯ ವಲಯದಡಿ** ಆಯವ್ಯಯ ಹಂಚಿಕೆಯನ್ವಯ SDP ಸೇರಿದಂತೆ ಒಟ್ಟಾರೆ ಹಂಚಿಕೆಯಾಗಿರುವ **ರೂ.707.00ಕೋಟಿ** ಅನುದಾನದ ವತಿಯಿಂದ ಈಗಾಗಲೇ **2013-14ರ** ಸಾಲಿಗೆ ರಾಜ್ಯ ವಲಯದ **MNPಯಡಿ ರೂ.105.00ಕೋಟಿಗಳನ್ನು** ರಾಜ್ಯದ ಎಲ್ಲಾ **30** ಜಿಲ್ಲಾ ಪಂಚಾಯತ್‌ಗಳಿಗೆ ಉಲ್ಲೇಖ (2)ರ ಸರ್ಕಾರಿ ಆದೇಶದಂತೆ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ **2ನೇ ಕಂತಾಗಿ ರೂ.105.00ಕೋಟಿಗಳನ್ನು** ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಈಗಾಗಲೇ ಅನುಮೋದನೆಯಾಗಿ ಮುಂದುವರಿದಿರುವ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು / ಪೂರ್ಣಗೊಳಿಸಲು ಅನುಮೋದಿತ ಕ್ರಿಯಾ ಯೋಜನೆ ಪ್ರಗತಿ ಆಧರಿಸಿ ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 52 ಗ್ರಾನೀಸ(2) 2013 ಬೆಂಗಳೂರು, ದಿನಾಂಕ:10.09.2013

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ **NRDWP** ಮಾರ್ಗಸೂಚಿಗಳನ್ವಯ ರಾಜ್ಯ ವಲಯದ **MNP (C&WQ)** ಘಟಕದಡಿ **2ನೇ ಕಂತಿನ ರೂ.105.00ಕೋಟಿ (ಒಂದು ನೂರ ಐದು ಕೋಟಿ ರೂಪಾಯಿಗಳು ಮಾತ್ರ)**ಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ **ಅನುಬಂಧ-1**ರಲ್ಲಿರುವಂತೆ ರಾಜ್ಯದ ಎಲ್ಲಾ **30** ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು **RTGS** ಮುಖೇನ ಈಗಾಗಲೇ ಗೊತ್ತುಪಡಿಸಿರುವ **SWSM** ಬ್ಯಾಂಕ್ ಮೂಲ **ಖಾತೆ ಸಂಖ್ಯೆ: 04462010091577** ಮುಖೇನ ವಿನಿಯೋಗಿಸತಕ್ಕದ್ದು. ಸದರಿ ಅನುದಾನ ವಿನಿಯೋಗದ ಪ್ರಗತಿಯನ್ನು **2013-14ರ** ಸಾಲಿನ **IMIS**ನಲ್ಲಿ ದಾಖಲಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾಗಿರುವ ರಾಜ್ಯ ವಲಯದ ಅನುದಾನವನ್ನು ರಾಜ್ಯ ಮಟ್ಟದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ **SWSM**ನ ಮೂಲ **ಖಾತೆ ಸಂಖ್ಯೆ: 04462010091577 ಯಿಂದ** ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಆಯಾ ಘಟಕವಾರು ಕಳುಹಿಸುವ ಬಿಲ್‌ಗಳನ್ನು ಈ ಆದೇಶದಲ್ಲಿ ಆಯಾ ಜಿಲ್ಲಾವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು.

4. ಮೇಲ್ಕಂಡ ಪರಿಕ್ರಮಕ್ಕನುಗುಣವಾಗಿ **NRDWPಯಡಿ** ರಾಜ್ಯವಲಯದ **MNPಯಡಿ ರೂ.105.00ಕೋಟಿಗಳನ್ನು** ರಾಜ್ಯದ ಪಾಲಾಗಿ ನಿರ್ದೇಶಕರು SWSM, ಬೆಂಗಳೂರು ರವರಿಗೆ ಬಿಡುಗಡೆ ಮಾಡಿದೆ. ಅಂತೆಯೇ, ರಾಜ್ಯವಲಯದ **MNP(C&Q)** ಘಟಕದಡಿ ಬಿಡುಗಡೆ ಮಾಡಿರುವ ಸದರಿ **ರೂ.105.00ಕೋಟಿಗಳನ್ನು 2013-14ನೇ** ಸಾಲಿನ **ಲೆಕ್ಕ ಶೀರ್ಷಿಕೆ 4215-01-102-9-01-059 (2013-14 ಯೋಜನೆ)**ರಡಿ ನಿರ್ದೇಶಕರು **SWSM**ರವರ ಮೇಲು ರುಜುವಿನೊಂದಿಗೆ **Payees Receipt** ಮೇಲೆ **TNMC** / ಖಜಾನೆಯಿಂದ ತೆಗೆದು ಕೇಂದ್ರ ಸರ್ಕಾರಕ್ಕೆ ಅಧೀಕೃತವಾಗಿ ಘೋಷಿಸಿರುವ **ಸಿಂಡಿಕೇಟ್ ಬ್ಯಾಂಕ್ ಖಾತೆ ಸಂಖ್ಯೆ: 04462010091577**ಗೆ ರಾಜ್ಯದ ಪಾಲಾಗಿ ಜಮೆ ಮಾಡತಕ್ಕದ್ದು.

...2

5. ಮೇಲ್ಕಂಡ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ / ಮುಂದುವರಿದಿರುವ / ಪೂರ್ಣಗೊಳಿಸಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಮಾತ್ರ ವಿನಿಯೋಗಿಸತಕ್ಕದ್ದು.

6. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ: ಗ್ರಾಅಪ/58/ಎಎಫ್ಎನ್/2012, **ದಿನಾಂಕ:01.04.2013**ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು :**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
8. ವಿಶೇಷಾಧಿಕಾರಿಗಳು (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
9. ಸರ್ಕಾರದ ಆಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
10. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾಮಂಡಳಿ, ಸಂಕೀರ್ಣ ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
11. ರಾಜ್ಯದ ಎಲ್ಲಾ (30) ಜಿಲ್ಲಾಪಂಚಾಯತ್‌ಗಳ ಅಧ್ಯಕ್ಷರುಗಳು.
12. ರಾಜ್ಯದ ಎಲ್ಲಾ ಜಿಲ್ಲಾ (30)ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
13. ರಾಜ್ಯದ ಎಲ್ಲಾ (176)ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
14. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರುಗಳು.
15. ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್ PRED ಕಛೇರಿ, ಬೆಂಗಳೂರು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂರಾ) ಇವರ ಆಪ್ತ ಕಾರ್ಯದರ್ಶಿಗಳು.
18. ನಿರ್ದೇಶಕರು, KRWSSA ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು, / ಅಪರ ನಿರ್ದೇಶಕರು, ಆರ್ಥಿಕ – KRWSSA , RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
19. **ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.**
20. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ ಕರ್ನಾಟಕ ವಿಕಾಸ ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
21. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
22. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).

25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).

25. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

## ಅನುಬಂಧ-1

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 52 ಗ್ರಾನೀಸ(2) 2013, ದಿ:10.09.2013ರ ಲಗತ್ತು**

**2013-14ರ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರಾಜ್ಯ ವಲಯದ NRDWP-MNP(C&WQ)ಯಡಿ ಬಿಡುಗಡೆಮಾಡಲಾದ 2ನೇ ಕಂತಿನ ಅನುದಾನದ ವಿವರ:**

| ಕ್ರ. ಸಂ. | ಜಿಲ್ಲೆ | ಬಿಡುಗಡೆ ಮಾಡಲಾದ 2ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಬಾಗಲಕೋಟೆ | 359.96 |
| 2 | ಬೆಂಗಳೂರು(ಗ್ರಾ) | 126.01 |
| 3 | ಬೆಂಗಳೂರು(ನ) | 78.63 |
| 4 | ಬೆಳಗಾಂ | 735.88 |
| 5 | ಬಳ್ಳಾರಿ | 454.89 |
| 6 | ಬೀದರ್ | 298.60 |
| 7 | ಬಿಜಾಪುರ | 578.43 |
| 8 | ಚಾಮರಾಜನಗರ | 315.50 |
| 9 | ಚಿಕ್ಕಬಳ್ಳಾಪುರ | 236.62 |
| 10 | ಚಿಕ್ಕಮಗಳೂರು | 400.79 |
| 11 | ಚಿತ್ರದುರ್ಗ | 468.87 |
| 12 | ದಕ್ಷಿಣ ಕನ್ನಡ | 243.58 |
| 13 | ದಾವಣಗೆರೆ | 326.69 |
| 14 | ಧಾರವಾಡ | 223.75 |
| 15 | ಗದಗ | 247.92 |
| 16 | ಗುಲ್ಬರ್ಗಾ | 603.97 |
| 17 | ಹಾಸನ | 380.52 |
| 18 | ಹಾವೇರಿ | 264.48 |
| 19 | ಕೊಡಗು | 230.33 |
| 20 | ಕೋಲಾರ | 218.05 |
| 21 | ಕೊಪ್ಪಳ | 312.72 |
| 22 | ಮಂಡ್ಯ | 277.24 |
| 23 | ಮೈಸೂರು | 344.77 |
| 24 | ರಾಯಚೂರು | 470.77 |
| 25 | ರಾಮನಗರ | 196.32 |
| 26 | ಶಿವಮೊಗ್ಗ | 465.71 |
| 27 | ತುಮಕೂರು | 591.67 |
| 28 | ಉಡುಪಿ | 188.67 |
| 29 | ಉತ್ತರ ಕನ್ನಡ | 566.54 |
| 30 | ಯಾದಗಿರಿ | 292.15 |
| | ಒಟ್ಟು: | **10500.00** |

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ